# ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ವಿದ್ಯಾರಣ್ಯ-೫೮೩೨೭೬**


**ಡಾ. ಸಣ್ಣರಾಮ,** **ದಿನಾಂಕ: ೧೨.೦೫.೨೦೨೨**

**ನಿರ್ದೇಶಕರು.**

## ಪ್ರಸ್ತಾವನೆ

**ವಿಷಯ:** ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರದಲ್ಲಿ ಲಂಬಾಣಿ ಬುಡಕಟ್ಟು ಸಮುದಾಯದ ಸಂತರು, ಇತಿಹಾಸ ಪುರುಷರು, ಸಾಂಸ್ಕೃತಿಕ ನಾಯಕರು, ಸಮಾಜ ಸುಧಾರಕರು ಹಾಗೂ ಸಾಧಕರ ಸೇವೆ ಸಲ್ಲಿಸಿದವರ ಬದುಕನ್ನು ಕುರಿತು ಸಂಶೋಧನಾತ್ಮಕ ಐದು ಪ್ರಬಂಧಗಳ ರಚನೆಯ ಯೋಜನೆಯನ್ನು ರೂಪಿಸಲಾಗಿದೆ.

**ಉಲ್ಲೇಖ:** ಮಾನ್ಯ ಕುಲಪತಿಗಳ ಆಡಳಿತಾತ್ಮಕ ಅನುಮೋದನೆ ಕಂಡಿಕೆ-೦೪ ಮತ್ತು ದಿನಾಂಕ: ೧೮.೦೪.೨೦೨೨.

## ಶೈಕ್ಷಣಿಕ ಅರ್ಹತೆ ಮತ್ತು ನಿಯಮಾವಳಿಗಳು

೧. ಅಧ್ಯಯನಕಾರರು ಅಂಗೀಕೃತ ವಿಶ್ವವಿದ್ಯಾಲಯದಿಂದ ಕಡ್ಡಾಯವಾಗಿ ಪಿಎಚ್.ಡಿ. (ಕನ್ನಡ, ಆಂಗ್ಲ, ಹಿಂದಿ, ಇತಿಹಾಸ, ಮಾನವಶಾಸ್ತ್ರ, ಸಮಾಜಶಾಸ್ತ್ರ, ಪುರಾತತ್ವ ವಿಷಯ)ಗಳಲ್ಲಿ ಪದವಿ ಪಡೆದಿರಬೇಕು.

೨. ಬಂಜಾರ ಸಮುದಾಯವನ್ನು ಕನ್ನಡ, ಬಂಜಾರ ಮತ್ತು ಆಂಗ್ಲ ಭಾಷೆಗಳಲ್ಲಿ ಅಧ್ಯಯನ ಅಥವಾ ಸಂಶೋಧನೆ ಮಾಡಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.

೩. ಯೋಜನೆಯ ಮೊದಲ ಹಂತದಲ್ಲಿ ಐದು ಸಂಶೋಧನ ಬರಹಗಾರರಿಗೆ ಮಾತ್ರ ಅವಕಾಶವಿದೆ.

೪. ಯೋಜನೆಯ ಆಸಕ್ತ ಅಭ್ಯರ್ಥಿಗಳು ತಮ್ಮ ವಿಷಯಕ್ಕೆ ಸಂಬಂಧಿಸಿದ ಸಾರಲೇಖವನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ನಿರ್ದೇಶಕರು, ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ ವಿಜಯನಗರ ಜಿಲ್ಲೆ-೫೮೩೨೭೬. ಇವರಿಗೆ ದಿನಾಂಕ: ೩೧.೦೫.೨೦೨೨ರೊಳಗೆ ಸಲ್ಲಿಸಬೇಕು.

೫. ಪ್ರಬಂಧದ ಸಾರಲೇಖವನ್ನು ತಜ್ಞ ಸಮಿತಿಯು ಪರಿಶೀಲಿಸಿ ಆಯ್ಕೆಯಾದ ಪ್ರಬಂಧದ ಲೇಖಕರಿಗೆ ಸಂದರ್ಶನವಿರುತ್ತದೆ.

೬. ಯೋಜನೆಯ ಪ್ರಬಂಧವು ಕನಿಷ್ಠ ೧೦೦ ಪುಟ ಇರಬೇಕು ಹಾಗೂ ಡಿಟಿಪಿ ಮಾಡಿದ ಅಕ್ಷರ (ಪಾಂಟ್ಸ್ ಸೈಜ್) ೧೩ ಗಾತ್ರದಲ್ಲಿ ಇರಬೇಕು.

೭. ಯೋಜನೆಗೆ ಸಂಬಂಧಿಸಿದ ಸಾಧಕರನ್ನು ಕುರಿತ ಪ್ರಬಂಧಗಳು ಎಂ.ಫಿಲ್. ಪಿಎಚ್.ಡಿ. ಸಂಶೋಧನ ಮಹಾಪ್ರಬಂಧಗಳಲ್ಲಿ ಪ್ರಕಟವಾಗಿರಬಾರದು ಹಾಗೂ ಪ್ರಸ್ತುತ ಸಂಶೋಧನೆ ಮಾಡುತ್ತಿರಬಾರದು.

೮. ಆಯ್ಕೆಯಾದ ಪ್ರಬಂಧಕಾರರಿಗೆ ಪ್ರಬಂಧವನ್ನು ಸಿದ್ಧಪಡಿಸಿಕೊಡಲು ಆರು ತಿಂಗಳುಗಳ ಕಾಲಾವಕಾಶವಿರುತ್ತದೆ.

೯. ಈ ಯೋಜನೆಯ ಪ್ರತಿ ಪ್ರಬಂಧ ರಚನೆಗೆ ನಿಗದಿಪಡಿಸಿದ ಮೊತ್ತ ರೂ. ೧,೦೦,೦೦೦/- (ಒಂದು ಲಕ್ಷ) ರೂಪಾಯಿಗಳನ್ನು ಗೌರವ ಸಂಭಾವನೆಯಾಗಿ ನೀಡಲಾಗುವುದು. ಇತರೆ ಇನ್ನಾವುದೇ ಭತ್ಯೆಯನ್ನು ನೀಡುವುದಿಲ್ಲ.

೧೦. ಪ್ರತಿ ಪ್ರಬಂಧದ ರಚನೆಗೆ ಮುಂಗಡವಾಗಿ ರೂ: ೨೫,೦೦೦/- (ಇಪ್ಪತ್ತೈದು ಸಾವಿರ ರೂಪಾಯಿ) ಗಳನ್ನು ನೀಡಲಾಗುವುದು.

Scanned with CamScanner

೧೧. ಪ್ರಬಂಧಕಾರರು ಪ್ರತಿ ತಿಂಗಳಿಗೊಮ್ಮೆ ಸಂಶೋಧನಾ ಪ್ರಗತಿಯ ವರದಿಯನ್ನು ಕೇಂದ್ರಕ್ಕೆ ಕಡ್ಡಾಯವಾಗಿ ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು. ಸತತ ಮೂರು ಪ್ರಗತಿ ವರದಿಯನ್ನು ಕೊಡದಿದ್ದರೆ ಅಂಥವರ ಆಯ್ಕೆಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ರದ್ದುಪಡಿಸಲಾಗುವುದು. ಅಂಥವರು ನಿಯಮಾನುಸಾರ ಮುಂಗಡ ಮೊತ್ತವನ್ನು ಹಿಂದಿರುಗಿಸಬೇಕು.

೧೨. ಯೋಜನೆಯ ಪ್ರಬಂಧ ಸಿದ್ಧಪಡಿಸಿ ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರಕ್ಕೆ ಸಲ್ಲಿಸಿದ ಮೇಲೆ ಮೂವರು ವಿಷಯ ತಜ್ಞರಿಗೆ ಪರಿಶೀಲನೆಗೆ ಕಳುಹಿಸಲಾಗುವುದು.

೧೩. ಒಂದು ವೇಳೆ ಸಂಶೋಧನಾ ಪ್ರಬಂಧವನ್ನು ಸಲ್ಲಿಸಿದ ಮೇಲೆ ತಿರಸ್ಕೃತವಾದರೆ, ನೀಡಿರುವ ಮುಂಗಡ ಮೊತ್ತವನ್ನು ನಿಯಮಾನುಸಾರ ಹಿಂದಿರುಗಿಸುವುದು ಕಡ್ಡಾಯ.

೧೪. ಪ್ರಬಂಧವು ಪ್ರಕಟಣೆಗೆ ಅರ್ಹವಾಗಿದೆಯೆಂದು ಪೂರಕ ವರದಿ ಬಂದ ಮೇಲೆ ಪ್ರಬಂಧವನ್ನು ಪ್ರಕಟಿಸಲಾಗುವುದು.

೧೫. ಯೋಜನೆಯ ಪೂರ್ಣ ಪ್ರಬಂಧವನ್ನು ಹಾರ್ಡ್ ಪ್ರತಿಯನ್ನು ಹಾಗೂ ಅಕ್ಷರ ನುಡಿಯಲ್ಲಿರಬೇಕು (ಫಾಂಟ್ಸ್ ಸೈಜ್) ೧೩ ಗಾತ್ರದಲ್ಲಿ ಡಿಟಿಪಿ ಮಾಡಿದ ಸಾಫ್ಟ್‌ಕಾಪಿಯನ್ನು ಕೇಂದ್ರಕ್ಕೆ ಸಲ್ಲಿಸಬೇಕು. ತಜ್ಞರ ವರದಿ ಪೂರಕವಾಗಿ ಬಂದ ನಂತರ ಉಳಿದ ಮೊತ್ತವನ್ನು ಪಾವತಿಸಲಾಗುವುದು.

೧೬. ಆಯ್ಕೆಯಾದ ಅಭ್ಯರ್ಥಿಗಳು ಈ ಮೇಲಿನ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವುದಕ್ಕೆ ಕರಾರು ಪತ್ರದಲ್ಲಿ ಸ್ವಯಂ ದೃಢೀಕರಿಸಿ **ನಿರ್ದೇಶಕರು, ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ ವಿಜಯನಗರ ಜಿಲ್ಲೆ-೫೮೩೨೭೬** ಇವರಿಗೆ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kannadauniversity.org ಗಮನಿಸಿ.

ನಿರ್ದೇಶಕರು

**ನಿರ್ದೇಶಕರು**
**ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ**
**ಕನ್ನಡ ವಿಶ್ವವಿದ್ಯಾಲಯ ಹಂಪಿ**
**ವಿಜಯನಗರ ಜಿ|| 583 276**

ಪ್ರತಿಗಳು:-

೧. ಮಾನ್ಯ ಕುಲಪತಿಗಳ ಆಪ್ತಶಾಖೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨. ಮಾನ್ಯ ಕುಲಸಚಿವರ ಆಪ್ತಶಾಖೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೩. ಉಪಕುಲಸಚಿವರು (ಆಡಳಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ.
೪. ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೫. ಸಮನ್ವಯ ಅಧಿಕಾರಿಗಳು, ಯುಜಿಸಿ/ಶೈಕ್ಷಣಿಕ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೬. ನಿರ್ದೇಶಕರು, ಮಾಹಿತಿ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೭. ಮುಖ್ಯಸ್ಥರು, ಗಣಕ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೮. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
೯. ಕಛೇರಿ ಪ್ರತಿ.

Scanned with CamScanner